## ಪಾಂಡಿತ್ಯ-ಔದಾರ್ಯ-ಯೋಗಶಕ್ತಿಗಳ ಸಾಕಾರ ಮೂರ್ತಿ ಶ್ರೀ ವಿದ್ಯಾಶ್ರೀಧರ ತೀರ್ಥರು

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಪರಮಪವಿತ್ರಪರಂಪರೆಯ ಭೂಷಾಮಣಿ ಶ್ರೀವಿದ್ಯಾಶ್ರೀಧರತೀರ್ಥಶ್ರೀಪಾದಂಗಳವರು. ಸೋಸಲೆ ಶ್ರೀವ್ಯಾಸರಾಜಸಂಸ್ಥಾನದಲ್ಲಿ ಬಂದ ವಿರಕ್ತಶಿಖಾಮಣಿಗಳಾದ ಶ್ರೀ ವಿದ್ಯಾಸಿಂಧುತೀರ್ಥಶ್ರೀಪಾದರ ನೆಚ್ಚಿನ ಶಿಷ್ಯರು.

ಟಿಪ್ಪು ಸುಲ್ತಾನನ ಮರಣದ ಸಮಯಕ್ಕೆ (1799) ಮುಮ್ಮಡಿ ಕೃಷ್ಣರಾಜ ವಡೆಯರವರು ಇನ್ನೂ ನಾಲ್ಕು ವರ್ಷದ ಕೂಸು. ಆಗ ಪೂರ್ಣಯ್ಯನವರು ಬ್ರಿಟಿಷ್ ಸರಕಾರದೊಂದಿಗೆ ಮುತ್ಸದ್ದಿತನದಿಂದ ವರ್ತಿಸಿ, ವಡೆಯರವರ ಅಜ್ಜಿ ಲಕ್ಷ್ಮಮ್ಮಣ್ಣಿಯವರನ್ನು ಸಿಂಹಾಸನದಲ್ಲಿ ಕೂಡಿಸಿ ತಾವು ಆಡಳಿತವನ್ನು ನಡೆಸುತ್ತಾರೆ.

ಆಡಳಿತವನ್ನು ಸ್ವೀಕರಿಸಿ ವಡೆಯರವರ ಮಾರ್ಗದರ್ಶನಕ್ಕಾಗಿ ಶ್ರೀರಂಗದಲ್ಲಿದ್ದ ಶ್ರೀ ವಿದ್ಯಾವಲ್ಲಭತೀರ್ಥಶ್ರೀಪಾದರನ್ನು ಮೈಸೂರಿಗೆ ಬರುವಂತೆ ಪ್ರಾರ್ಥಿಸುತ್ತಾರೆ. ಶ್ರೀಮಠಕ್ಕೆ ಸಮಗ್ರ ಸೋಸಲೆ ಗ್ರಾಮವನ್ನು ದಾನವನ್ನಾಗಿ ನೀಡುತ್ತಾರೆ. ಹಾಗೆಯೇ ಉಳಿದ ಮತಗಳ ಯತಿಗಳನ್ನೂ, ಪಂಡಿತರನ್ನೂ ಮೈಸೂರುಪ್ರಾಂತಕ್ಕೆ ಆಹ್ವಾನಿಸಿ ಮಠಗಳನ್ನು ನೀಡಿ ಎಲ್ಲ ದರ್ಶನಗಳ ಕುರಿತೂ ವಡೆಯರವರು ಶಿಕ್ಷಣ ಪಡೆಯುವ ವ್ಯವಸ್ಥೆ ಮಾಡಿರುತ್ತಾರೆ. ಆಂಧ್ರ, ತಮಿಳುನಾಡು, ಕೇರಳಗಳಿಂದ ಜಟ್ಟಿಗಳನ್ನು, ರಾವುತ, ಮಾವುತರನ್ನು ಕರೆಯಿಸಿ ಯುದ್ಧವಿದ್ಯೆಯ ತರಬೇತಿಯನ್ನು ನೀಡಿರುತ್ತಾರೆ.

ಸಿಂಹಾಸನಕ್ಕೆ ದಿವಾನ್ ಪೂರ್ಣಯ್ಯನವರ ನಿಸ್ವಾರ್ಥ ಮತ್ತು ನಿಷ್ಕಪಟ ಸೇವೆಯನ್ನು ಕಂಡ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಪೂರ್ಣಯ್ಯನವರಿಗೆ 1807ನೆ ಇಸವಿಯ ವರ್ಷಕ್ಕೆ 10000 ಚಿನ್ನದನಾಣ್ಯಗಳ (ಇವತ್ತಿನ ಲೆಕ್ಕಕ್ಕೆ ವಾರ್ಷಿಕ 120 ಕಿಲೋಗ್ರಾಂ ಬಂಗಾರ) ಆದಾಯವುಳ್ಳ ಯಳಂದೂರು ಗ್ರಾಮವನ್ನು

ಪೂರ್ಣಯ್ಯನವರು ತಮ್ಮ ಈ  ಸ್ವಂತ ಹಣದಲ್ಲಿ ಶ್ರೀಮಠಕ್ಕೆ ಭೂರಿ ಸಂಪತ್ತನ್ನು ದಾನ ಮಾಡುತ್ತಾರೆ. ದೇವರ ಪೂಜೆಗೆ ಉಪಯೊಗಿಸುವ ಗಿಂಡಿ, ಉದ್ದರಣೆಗಳಿಂದ ಆರಂಭಿಸಿ ಪಂಚಪಾತ್ರೆ, ಮಣೆ ಪೀಠಗಳವರೆಗೆ ಎಲ್ಲವನ್ನೂ ಬಂಗಾರದಲ್ಲಿ ಮಾಡಿಸಿ, ನೈವೇದ್ಯದ ಕಾಲದಲ್ಲಿ ದೇವರ ಮುಂದೆ ಹಿಡಿಯಲು ಬಂಗಾರದ ಸರಳಪಳಿಯಲ್ಲಿ ಜೋಡಿಸಿದ ರೇಶಿಮೆಯ ವಸ್ತ್ರವನ್ನು ತಯಾರು ಮಾಡಿಸಿ ತಮ್ಮ ಕುಲಗುರುಗಳಾದ ಶ್ರೀ ವಿದ್ಯಾವಲ್ಲಭತೀರ್ಥಶ್ರೀಪಾದಂಗಳವರಿಗೆ 1809 ರ ಜನವರಿ 22 ರಂದು ದಾನ ನೀಡಿರುತ್ತಾರೆ.  ಹೀಗೆ ವಿದ್ಯಾವಲ್ಲಭರ ಕಾಲದಲ್ಲಿ ಎಲ್ಲವೂ ಸಹ ಬಂಗಾರಮಯ. ಅದನ್ನು ದಾನ ಸ್ವೀಕಾರ ಮಾಡುವಾಗ ತ್ರಿಕಾಲಜ್ಞಾನಿಗಳಾದ ಶ್ರೀ ವಿದ್ಯಾವಲ್ಲಭರು ಪೂರ್ಣಯ್ಯನವರಿಗೆ ಹೇಳಿರುತ್ತಾರೆ. ನೀವು ನೀಡಿರುವ ಈ ಎಲ್ಲ ಪದಾರ್ಥಗಳೂ ಸಹ ಪರಮಾತ್ಮ ಸಾಕ್ಷಾತ್ತಾಗಿ ಸ್ವೀಕರಿಸುತ್ತಾನೆ,



**“ಧನ್ಯಂ ಕರೋತಿ ತ್ವಾಂ ಸಿಂಧುಃ**
**ಧಾನ್ಯೀಕೃತ್ಯ ಸುವರ್ಣಕಮ್”**

**ಎಂದು ನುಡಿಯುತ್ತಾರೆ. ನೀವು ನೀಡಿದ ಬೆಳ್ಳಿ ಬಂಗಾರಗಳನ್ನೆಲ್ಲ ‘ಸಿಂಧು’ ಧಾನ್ಯವನ್ನಾಗಿ ಪರಿವರ್ತಿಸಿ ನಿಮ್ಮನ್ನು ಧನ್ಯರನ್ನಾಗಿ ಮಾಡುತ್ತದೆ ಎಂದು ಗೂಢವಾಗಿ ಹೇಳಿರುತ್ತಾರೆ.**

ಈ ಘಟನೆಯಾದ 70 ವರ್ಷಗಳಿಗೆ ಮೈಸೂರು ಪ್ರಾಂತದಲ್ಲಿ ಭೀಕರ ಬರಗಾಲ ಒದಗಿಬರುತ್ತದೆ. ಶ್ರೀವ್ಯಾಸರಾಜಸಂಸ್ಥಾನದಲ್ಲಿ ನಾಲ್ಕುಜನ ಪೀಠಾಧಿಪತಿಗಳು ಆಗಿಹೋಗಿ **ಶ್ರೀವಿದ್ಯಾಸಿಂಧುತೀರ್ಥಶ್ರೀಪಾದಂಗಳವರು**



ಪೀಠದಲ್ಲಿರುತ್ತಾರೆ. ಆಗ ಮಠದಲ್ಲಿದ್ದ ಸುಮಾರು ಒಂದು ಸಾವಿರ ಕಿಲೋಗ್ರಾಂಗಳಷ್ಟು ಬಂಗಾರದಿಂದ

ಧಾನ್ಯಗಳನ್ನು ಕೊಂಡು ನಾಲ್ಕಾರು ವರ್ಷಗಳ ಲಕ್ಷಾವಧಿಜನರನ್ನು  ವಿದ್ಯಾಸಿಂಧುತೀರ್ಥ-ಶ್ರೀಪಾದಂಗಳವರು ರಕ್ಷಿಸುತ್ತಾರೆ.

**ಸಿಂಧು ಎಂದರೆ ವಿದ್ಯಾಸಿಂಧುತೀರ್ಥರು, ಅವರು ಬಂಗಾರವನ್ನು ಧಾನ್ಯವನ್ನಾಗಿ ಪರಿವರ್ತಿಸಿ, ಅರ್ಥಾತ್ ದೂರದ ಊರುಗಳಲ್ಲಿದ್ದ ಧಾನ್ಯಗಳಿನ್ನು ಬಂಗಾರವನ್ನಿತ್ತು ಕೊಂಡುಕೊಂಡು ತಂದು ಬಡಬಗ್ಗರಿಗೆ ಕ್ಷಾಮಪೀಡಿತರಿಗೆ ನೀಡಿ ಆ ಪುಣ್ಯವನ್ನು ಪೂರ್ಣಯ್ಯನವರಿಗೆ ನೀಡುತ್ತಾರೆ ಎನ್ನುವದು ತ್ರಿಕಾಲಜ್ಞಾನಿಗಳಾದ ಶ್ರೀವಿದ್ಯಾವಲ್ಲಭತೀರ್ಥಶ್ರೀಪಾದಂಗಳವರ ಮಾತಿನ ಆಶಯ.**

ಜನರಿಗಾಗಿ ಮಠದ ಸಮಸ್ತ ಸಂಪತ್ತನ್ನೂ ದಾನ ಮಾಡಿದ ಶ್ರೀ ವಿದ್ಯಾಸಿಂಧುತೀರ್ಥ-ಶ್ರೀಪಾದಂಗಳವರ ನೆಚ್ಚಿನ ಶಿಷ್ಯ, ಅವರ ಎಲ್ಲ ಕಾರ್ಯಗಳಲ್ಲಿ ಸಾಚಿವ್ಯವನ್ನು ವಹಿಸಿದವರು ಶ್ರೀ ವಿದ್ಯಾಶ್ರೀಧರ ತೀರ್ಥಶ್ರೀಪಾದಂಗಳವರು. (ಪೂರ್ವಾಶ್ರಮದಲ್ಲಿ ಅವರ ಹೆಸರು ಭೀಮಸೇನಾಚಾರ್ಯರು ಎಂದಾಗಿತ್ತು ಎಂದು

ಹೇಳುತ್ತಾರೆ) ಆಗ ಕೇರಳದ ಪ್ರಾಂತಗಳಿಂದ ದುಪ್ಪಟ್ಟು, ನಾಲ್ಕುಪಟ್ಟು ಹಣವನ್ನು ನೀಡಿ ಧಾನ್ಯವನ್ನು ತರಿಸುತ್ತಾರೆ. ಘಟ್ಟಗಳ ಹಾದಿ. ಕಳ್ಳಕಾಕರ, ದರೋಡೆಕೋರರ ಕಾಟ. ಇಷ್ಟೆಲ್ಲವನ್ನೂ ನಿಭಾಯಿಸಿ ಶ್ರೀಗುರುಗಳ ಮನಸ್ಸಿನ ಅಪೇಕ್ಷೆಯಂತೆ ಮಠದಲ್ಲಿದ್ದ ಬಂಗಾರದಿಂದ ಎಷ್ಟು ಸಾಧ್ಯವೋ ಅಷ್ಟೂ ಊರುಗಳಿಗೆ ಧಾನ್ಯಪದಾರ್ಥಗಳನ್ನು ನೀಡಿದವರು ಪೂರ್ವಾಶ್ರಮದ ಶ್ರೀ ವಿದ್ಯಾಶ್ರೀಧರತೀರ್ಥಶ್ರೀಪಾದಂಗಳವರು. ಬಡಬಗ್ಗರಿಗೆಲ್ಲ ಅಕ್ಕಿ ಬೇಳೆಗಳನ್ನು ನೀಡಿ ಕಾಪಾಡಿದ ಶ್ರೀ ವಿದ್ಯಾಸಿಂಧುತೀರ್ಥ-ಶ್ರೀಪಾದಂಗಳವರನ್ನು ಜನರು 'ಅಕ್ಕಿಬೇಳೆ ಸ್ವಾಮಿಗಳು' ಎಂದೇ ಪ್ರೀತಿಯಿಂದ ಕರೆಯುತ್ತಿದ್ದರು. ಹೀಗೆ ಮಠದ ಬಂಗಾರವನ್ನೆಲ್ಲ ಮಾರಿ ಆವಶ್ಯಕತೆಯ ಕಾಲದಲ್ಲಿ ಬಡಬಗ್ಗರಿಗೆ ಆಹಾರಪದಾರ್ಥಗಳನ್ನು ನೀಡಿ ರಕ್ಷಿಸಿದ ಸಂಸ್ಥಾನ ನಮ್ಮ ಶ್ರೀಮದ್ ವ್ಯಾಸರಾಜಸಂಸ್ಥಾನ.

ಶ್ರೀ ಭೀಮಸೇನಾಚಾರ್ಯರ ಈ ಗುರುಭಕ್ತಿ, ಔದಾರ್ಯ, ದಕ್ಷತೆ, ವಿನಯಗಳಿಗೆ ಕಳಶವಿಟ್ಟಂತೆ ಇದ್ದಂತಹ ಗುಣ ಅವರ ಅದ್ಭುತ ಪಾಂಡಿತ್ಯ.

**ಬಾಲ್ಯದಿಂದಲೇ ಅಪ್ರತಿಮ ಮೇಧಾಶಕ್ತಿಯನ್ನು ಹೊಂದಿದ್ದ ಆಚಾರ್ಯರು ಸರ್ವಮೂಲಗ್ರಂಥಗಳು, ಟೀಕಾಗ್ರಂಥಗಳ ಸಮೇತವಾಗಿ ಸಮಗ್ರ ವ್ಯಾಸತ್ರಯವನ್ನು ಮುಖೋದ್ಗತವಾಗಿ ಪಾಠ ಹೇಳುತ್ತಿದ್ದರು. ಶ್ರೀ ನರಸಿಂಹ ಮತ್ತು ವರಾಹಮಂತ್ರಗಳನ್ನು ಗುರುಗಳಿಂದ ಉಪದೇಶ ಪಡೆದು ಸಿದ್ಧಿಯನ್ನು ಗಳಿಸಿದ್ದ ತಪೋಮೂರ್ತಿ. ತೇಜಃಪೂರ್ಣವಾದಂತಹ ಶರೀರ.  ಶ್ರೀ ಭೀಮಸೇನಾಚಾರ್ಯರ ಈ ಎಲ್ಲ ಮಹಾಸದ್ಗುಣಗಳನ್ನು ಕಂಡು ಸಂತುಷ್ಟರಾಗಿದ್ದ ಶ್ರೀ ವಿದ್ಯಾಸಿಂಧುತೀರ್ಥಶ್ರೀಪಾದರು ಅವರಿಗೆ ಸಂನ್ಯಾಸವನ್ನು ನೀಡಿ, ವಿದ್ಯಾಶ್ರೀಧರತೀರ್ಥರು ಎಂದು ನಾಮಕರಣ ಮಾಡಿ ಮೂಲಗೋಪಾಲಕೃಷ್ಣದೇವರ ಮೂಲಪಟ್ಟಾಭಿ-ರಾಮದೇವರ, ಪೂಜಾಸೌಭಾಗ್ಯವನ್ನು ಕರುಣಿಸುತ್ತಾರೆ.** ಸಂನ್ಯಾಸ ಸ್ವೀಕರಿಸಿದ ಕೆಲವೇ ದಿವಸಗಳಲ್ಲಿ ಅವರ ಅದ್ಭುತ ಪಾಂಡಿತ್ಯಕ್ಕೆ ಸಾಕ್ಷಿಯಾದ ಘಟನೆ ಜರುಗುತ್ತದೆ.

ಉತ್ತರ ಭಾರತದ — ಪ್ರಾಯಃ ಬಂಗಾಳಪ್ರಾಂತದ — ವಿಶ್ವನಾಥಮಿಶ್ರ ಎಂಬ ಪಂಡಿತ ತನ್ನ

ಶಿಷ್ಯಪರಿವಾರದೊಂದಿಗೆ ತಮಿಳುನಾಡಿದ ಮಧುರೈ ಪ್ರಾಂತಕ್ಕೆ ಬಂದಿರುತ್ತಾನೆ. ಮಹಾಗರ್ವಿಷ್ಠನಾದ ಪಂಡಿತ. ತನ್ನ ಪಾಂಡಿತ್ಯದ ಬಲದಿಂದ ರಾಜಾಶ್ರಯವನ್ನು ಪಡೆದು ಬೆಳ್ಳಿಯ ಕವಚವಿದ್ದ ಪಲ್ಲಕ್ಕಿಯಲ್ಲಿ ಓಡಾಡುತ್ತಿದ್ದವನು. ಅವನು ಶ್ರೀಮಠಕ್ಕೆ ಪತ್ರವನ್ನು ಬರೆದು ವಾದಕ್ಕಾಗಿ ಅಹ್ವಾನಿಸುತ್ತಾನೆ.

ಸೋಸಲೆಯಲ್ಲಿದ್ದ ವೃದ್ಧಯತಿಗಳಾದ ಶ್ರೀವಿದ್ಯಾಸಿಂಧುತೀರ್ಥಶ್ರೀಪಾದರು ನೂತನಯತಿಗಳಾದ ಶ್ರೀವಿದ್ಯಾಶ್ರೀಧರತೀರ್ಥರನ್ನು ವಾದ ಮಾಡಲು ಕೊಟ್ಟು ಕಳುಹಿಸುತ್ತಾರೆ. ನ್ಯಾಯ ಮತ್ತು ಮೀಮಾಂಸಾಶಾಸ್ತ್ರಗಳಲ್ಲಿ ಅಪ್ರತಿಮ ವಿದ್ವಾಂಸ. ಅವನ ಜೊತೆಯಲ್ಲಿ ಇಪ್ಪತ್ತೇಳು ದಿವಸಗಳ ಕಾಲ ನೂರಾರು ವಿಷಯಗಳ ಕುರಿತು ಸುದೀರ್ಘ ವಾಕ್ಯಾರ್ಥ ನಡೆಯುತ್ತದೆ. ಶ್ರೀ ವಿದ್ಯಾಶ್ರೀಧರತೀರ್ಥಶ್ರೀಪಾದಂಗಳವರು ಅವನ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿ, ಅವನಿಗೆ ಉತ್ತರಿಸಲು ಸಾಧ್ಯವೇ ಇಲ್ಲದ ಪ್ರಶ್ನೆಗಳನ್ನು ಅವನಿಗೊಡ್ಡಿ, ವಾದದಲ್ಲಿ ಗೆಲ್ಲುತ್ತಾರೆ. ಶ್ರೀಮನ್ ನ್ಯಾಯಾಮೃತದ ದಿಗ್ವಿಜಯಪತಾಕೆಯನ್ನು ಹಾರಿಸುತ್ತಾರೆ.

ವಾದದಲ್ಲಿ ಸೋತ ವಿಶ್ವನಾಥಮಿಶ್ರ ತನ್ನ ಪಲ್ಲಕ್ಕಿಯನ್ನು ಒಪ್ಪಿಸಿ ಜಯಪತ್ರಿಕೆಯನ್ನು ಬರೆದು ನೀಡುತ್ತಾನೆ. (ವಿಶ್ವನಾಥಮಿಶ್ರ ವಾದಕ್ಕಾಗಿ ನೀಡಿದ್ದ ಆಹ್ವಾನಪತ್ರಿಕೆ, ಬಳಿಕ ಒಪ್ಪಿಸಿದ ಜಯಪತ್ರಿಕೆ, ಶ್ರೀಮಠದ ಎಲ್ಲ ಗುರುಗಳು ಸಂಪಾದಿಸಿದ್ದ ಜಯಪತ್ರಿಕೆಗಳು, ಸಾವಿರಾರು ಮಹತ್ತ್ವದ ದಾಖಲೆಗಳು ಕಾವೇರಿಯ 1925ರ ಮಹಾಪ್ರವಾಹದಲ್ಲಿ ಕೊಚ್ಚಿ ಹೋದದ್ದು ದೊಡ್ಡ ದುರಂತ. ಅಂತಹ ಪ್ರವಾಹದಲ್ಲಿಯೂ ಶ್ರೀವಿದ್ಯಾವಾರಿಧಿತೀರ್ಥಶ್ರೀಪಾದಂಗಳವರು ಅನೇಕ ಮಹತ್ತ್ವದ ದಾಖಲೆಗಳನ್ನು ಉಳಿಸುತ್ತಾರೆ.)

ವಿಶ್ವನಾಥಮಿಶ್ರನನ್ನು ವಾದದಲ್ಲಿ ಗೆದ್ದ ಶ್ರೀವಿದ್ಯಾಶ್ರೀಧರತೀರ್ಥಶ್ರೀಪಾದಂಗಳವರು ತಾವು ಗೆದ್ದ ಪಲ್ಲಕ್ಕಿಯಲ್ಲಿಯೇ ಕುಳಿತು ಗುರುಗಳ ದರ್ಶನಕ್ಕಾಗಿ ಮಧುರೈನಿಂದ ಸೋಸಲೆಗೆ ಪ್ರಯಾಣ ಆರಂಭಿಸುತ್ತಾರೆ. ಗುರುಗಳ ವೃದ್ಧಾಪ್ಯ ಎನ್ನುವ ಕಾರಣಕ್ಕೆ ವೇಗದ ಪ್ರಯಾಣ ನಡೆದಿರುತ್ತದೆ. **ಮಧ್ಯದಲ್ಲಿ ಕಾಡಿನ ಹಾದಿ. ಬರುವಾಗ ದಾರಿಯಲ್ಲಿ ಶ್ರೀಗುರುಗಳ ಔದಾರ್ಯಕ್ಕೆ ಕಾರಣವಾದ ಮತ್ತೊಂದು ಘಟನೆ ನಡೆಯುತ್ತದೆ.**

ಒಂದು ಕುಟುಂಬ, ಬಸುರಿಯಾದ ತಮ್ಮ ಮಗಳನ್ನು ಬಾಣಂತನಕ್ಕಾಗಿ ಕರೆದುಕೊಂಡು ಬರುತ್ತಿರುತ್ತಾರೆ. ಎತ್ತಿನಬಂಡಿಯಲ್ಲಿ ಪ್ರಯಾಣ. ಒಂದು ಇಳಿಜಾರಿನಲ್ಲಿ ಬಂಡಿ ಉರುಳಿ ಚಕ್ರ ಮುರಿದು ಬಿಟ್ಟಿರುತ್ತದೆ. ಬಸುರಿ ಹುಡುಗಿ. ನಡೆಯಲು ಸಾಧ್ಯವಿಲ್ಲ. ಇರುವ ಬಂಡಿ ಮುರಿದು ಹೋಗಿದೆ. ದಾರಿಯಲ್ಲಿ ಬರುತ್ತಿದ್ದ ಶ್ರೀವಿದ್ಯಾಶ್ರೀಧರತೀರ್ಥ-ಶ್ರೀಪಾದಂಗಳವರು ಇದನ್ನು ಕಾಣುತ್ತಾರೆ. ತಾವು ವಾದದಲ್ಲಿ ಗೆದ್ದಿದ್ದ ಬೆಳ್ಳಿಯ ಪಲ್ಲಕ್ಕಿಯಿಂದ ಕೆಳಗಿಳಿದು ಆ ಪಲ್ಲಕ್ಕಿಯನ್ನು ಆ ಕುಟುಂಬಕ್ಕೆ ನೀಡಿ, ಅವರೆಲ್ಲಿಗೆ ಹೋಗುತ್ತಾರೋ ಅಲ್ಲಿಗೆ ತಲುಪಿಸಲು ಬೋವಿಗಳಿಗೆ ಆಜ್ಞೆ ಮಾಡಿ, ಮುಂದೆ ಮಗುವನ್ನೂ ಇದೇ ಪಲ್ಲಕ್ಕಿಯಲ್ಲಿ ಹೊತ್ತು ಮಗಳನ್ನು ಗಂಡನ ಮನೆಗೆ ಹೋಗಲು ಆ ತಂದೆತಾಯಿಗಳಿಗೆ ತಿಳಿಸಿ ತಾವು ಮುಂದೆ ನಡೆದು ಬಿಡುತ್ತಾರೆ.

ದುಃಖದಲ್ಲಿರುವವರ ಕಷ್ಟಕ್ಕೆ ಕರಗುವ, ಇರುವದೆಲ್ಲವನ್ನೂ ದೀನರ ಉದ್ಧಾರಕ್ಕಾಗಿ ಬಳಸುವ ಮಹಾಸದ್ಗುಣ ಶ್ರೀವ್ಯಾಸರಾಜಸಂಸ್ಥಾನದ ರಕ್ತದಲ್ಲಿಯೇ ಇದೆ.

“ಆರ್ತತ್ರಾಣೈಕದಕ್ಷಮ್” ಎಂದು ಪ್ರಸಿದ್ಧರಾದವರು ಶ್ರೀ ಬ್ರಹ್ಮಣ್ಯತೀರ್ಥರು. ಕುಹುಯೋಗ ಬಂದಿದೆ ಎಂದರೆ ಅಂಜಬೇಡ ಎಂದು ನುಡಿದು ಸಿಂಹಾಸನದಲ್ಲಿ ಕುಳಿತು ರಾಜನನ್ನು ಕಾಪಾಡಿದವರು, ಒಂದು ಲಕ್ಷಕ್ಕೂ ಮಿಗಿಲಾದ ಕುಟುಂಬಕ್ಕೆ ವೃತ್ತಿಯನ್ನು ಕಲ್ಪಿಸಿದವರು ಶ್ರೀ ವ್ಯಾಸರಾಜರು. ವಿಜಯನಗರಸಾಮ್ರಾಜ್ಯ-ಪತನವಾಗಿ ರಾಜಮನೆತನ ದಿಕ್ಕೆಟ್ಟು ಓಡಿದಾಗ ಅವರನ್ನು ಪೆನುಗೊಂಡೆಗೆ ಕರೆದುಕೊಂಡು ಬಂದು **“ರಕ್ಷಿತಾನ್ ಸ್ವೇನ ಕುರ್ವಾಣೋ ಲಕ್ಷ್ಮೀಶಾನ್ ಭಿಕ್ಷುಕಾನಪಿ”** ಮತ್ತೆ ಅವರಿಗೆ ಐಶ್ವರ್ಯ ದೊರೆಯುವಂತೆ ಅನುಗ್ರಹಿಸಿದವರು ಶ್ರೀ ಲಕ್ಷ್ಮೀಕಾಂತತೀರ್ಥರು.  ಸಮಗ್ರ ಊರಿಗೆ ಊರನ್ನು ನಿರ್ಮಾಣ ಮಾಡಿ ಅವರಿಗೆ ವೃತ್ತಿಯನ್ನು ಕಲ್ಪಿಸಿದವರು ಶ್ರೀರಾಮಚಂದ್ರತೀರ್ಥರು. ತಮ್ಮ ಸುತ್ತಮುತ್ತಲಿನ ಪ್ರಾಂತಕ್ಕೆ ಕ್ಷಾಮ ಬಂದರೆ ಮಠದ ಬಂಗಾರವನ್ನು ಮಾರಿ ಪರರಾಜ್ಯದಿಂದ ಧಾನ್ಯ ತರಿಸಿ ನೂರಾರು ಊರಿನ ಜನರನ್ನು ರಕ್ಷಿಸಿದ ಅಕ್ಕಿಬೇಳೆಸ್ವಾಮಿಗಳು ಶ್ರೀವಿದ್ಯಾಸಿಂಧು-ತೀರ್ಥಶ್ರೀಪಾದರು. ಕಾರುಣ್ಯವೇ ಮೈವೆತ್ತ,

ದೀನರಿಗಾಗಿ ಕರಗುವ ಮಹಾಸದ್ಗುಣದ ಪರಂಪರೆಯಲ್ಲಿ ಬಂದ ಶ್ರೀವಿದ್ಯಾಶ್ರೀಧರತೀರ್ಥರಲ್ಲಿ ಈ ರೀತಿಯ ಔದಾರ್ಯ ಆಶ್ಚರ್ಯವಲ್ಲ.

ಸೋಸಲೆಗೆ ಬಂದು ಗುರುಗಳಿಗೆ ಜಯಪತ್ರವನ್ನು ಒಪ್ಪಿಸುತ್ತಾರೆ. ಗುರುಗಳಿಂದ ಶಿಕ್ಷಣವನ್ನು ಪಡೆಯುತ್ತ, ಅವರ ಸೇವೆಯನ್ನು ಮಾಡುತ್ತ, ಶಿಷ್ಯರಿಗೆ ನಿರಂತರ ವ್ಯಾಸತ್ರಯ-ನ್ಯಾಯಸುಧಾದಿಗ್ರಂಥಗಳ ಪಾಠ ಹೇಳುತ್ತ ಶ್ರೀವಿದ್ಯಾಶ್ರೀಧರತೀರ್ಥರಿರುತ್ತಾರೆ.

ಸುಭಾನು ಸಂವತ್ಸರದ ಆಷಾಢ ಶುದ್ಧ ತೃತಿಯಾ ಶ್ರೀ ಶೇಷಚಂದ್ರಿಕಾಚಾರ್ಯರ ಪೂರ್ವಾರಾಧನೆಯಂದು ಸಮಗ್ರ ಬೃಹತೀಸಹಸ್ರಮಂತ್ರಗಳ ವ್ಯಾಖ್ಯಾನವನ್ನು ಆರಂಭಿಸಲು ಶ್ರೀವಿದ್ಯಾಸಿಂಧುತೀರ್ಥರು ಆದೇಶಿಸುತ್ತಾರೆ. ಆ ವರ್ಷ ತಿರುಮಕೂಡಲಿ-ನಲ್ಲಿಯೇ ಚಾತುರ್ಮಾಸ್ಯ ನೆರವೇರುತ್ತದೆ. ಸಮಗ್ರ ಒಂದು ವರ್ಷಗಳ ಕಾಲ ಬೃಹತೀಸಹಸ್ರದ ಪಾಠವನ್ನು ಶ್ರೀ ಶೇಷಚಂದ್ರಿಕಾಚಾರ್ಯರ ವ್ಯಾಖ್ಯಾನದೊಂದಿಗೆ ಶಿಷ್ಯರಿಗೆ

ವಿದ್ಯಾಶ್ರೀಧರತೀರ್ಥಶ್ರೀಪಾದಂಗಳವರು ಹೇಳುತ್ತಾರೆ. ಗುರುಗಳು ಪಕ್ಕದಲ್ಲಿಯೇ ಕುಳಿತು ಆನಂದದಿಂದ ಶಿಷ್ಯನ ವೇದವ್ಯಾಖ್ಯಾನಕೌಶಲವನ್ನು ಆಸ್ವಾದಿಸುತ್ತಾರೆ.

ಮತ್ತೆ ತಾರಣಸಂವತ್ಸರದ ಆಷಾಢಶುದ್ಧ ಚತುರ್ಥಿಯಂದು ಶ್ರೀ ಶೇಷಚಂದ್ರಿಕಾಚಾರ್ಯರ ಆರಾಧನೆ ನೆರವೇರುತ್ತದೆ. ಪಂಚಮಿಯ ದಿವಸ ಒಂದು ವರ್ಷದಿಂದ ನಡೆಯುತ್ತಿದ್ದ ಬೃಹತೀಸಹಸ್ರದ ಪಾಠ ಮುಗಿಯುತ್ತದೆ. ವಿದ್ಯಾಮಠದ ವಿದ್ಯೆಯನ್ನು ಉಳಿಸುತ್ತಾರೆ ಇವರು ಎನ್ನುವದನ್ನು ಮನಗಂಡ ಶ್ರೀವಿದ್ಯಾಸಿಂಧುತೀರ್ಥರು ಸಂತುಷ್ಟರಾಗಿ  ಸಪ್ತಮಿಯ ದಿವಸ ಎಲ್ಲರನ್ನೂ ಕರೆದುಕೊಂಡು ಸೋಸಲೆಗೆ ಹಿಂತಿರುಗುತ್ತಾರೆ. ನವಮಿಯ ದಿವಸ ಪೂಜೆ ಮಗಿದು ತೀರ್ಥವನ್ನು ಸ್ವೀಕರಿಸಿ ಗಂಧಾಕ್ಷತೆಗಳನ್ನು ಧರಿಸಿದ ಶ್ರೀವಿದ್ಯಾಸಿಂಧುತೀರ್ಥಶ್ರೀಪಾದರು “ಶ್ರೀಕೃಷ್ಣ” ಎಂದು ಸ್ಮರಣೆ ಮಾಡುತ್ತ ದೇಹತ್ಯಾಗ ಮಾಡುತ್ತಾರೆ.

ವಿದ್ಯಾಸಿಂಧುತೀರ್ಥರು ದೇಹತ್ಯಾಗ ಮಾಡಿದ ದಿವಸ ಸುತ್ತಮುತ್ತಲಿನ ನೂರಾರು ಊರುಗಳಿಂದ ಜನಸಾಗರವೇ ಹರಿದುಬರುತ್ತದೆ. ಮಳೆ ಬೆಳೆಯಿಲ್ಲದ ಕಾಲದಲ್ಲಿ ಹೊಟ್ಟೆ ತುಂಬ ಅನ್ನವಿಟ್ಟು ಸಾಕಿದ ಗುರುಗಳು. ಬ್ರಾಹ್ಮಣ ಶೂದ್ರ ಎಂದು ನೋಡದೆ ಅನ್ನವನ್ನು ನೀಡಿದವರು. ಸುತ್ತಮುತ್ತಲಿನ ಪ್ರಾಂತದ, ಎಲ್ಲ ವರ್ಗದ ಜನರೂ ಗುರುಗಳನ್ನು ಕಳೆದುಕೊಂಡು ಕಣ್ಣೀರಾಗುತ್ತಾರೆ. ಗುರುಗಳ ದರ್ಶನಕ್ಕೆ ಆಗಿನ ಮೈಸೂರಿನ ರಾಜರಾಗಿದ್ದ ಹತ್ತನೇ ಚಾಮರಾಜವಡೆಯರವರು ಮತ್ತು ದಿವಾನರಾಗಿದ್ದ ಶೇಷಾದ್ರಿ ಅಯ್ಯರವರು ಸ್ವತಃ ಆಗಮಿಸುತ್ತಾರೆ. ತಮ್ಮ ಪ್ರಾಂತದ ಜನತೆ ಗುರುಗಳಲ್ಲಿ ತೋರುತ್ತಿದ್ದ ವಿಶ್ವಾಸವನ್ನು ಕಂಡು ನಿಬ್ಬೆರಗಾಗುತ್ತಾರೆ.

ಹೀಗೆ ರಾಜರು, ರಾಜಮನೆತನದವರು, ಉನ್ನತ ಅಧಿಕಾರಿಗಳಿಂದ ಆರಂಭಿಸಿ ಹೊಲದಲ್ಲಿ ದುಡಿಯುವ ಕಟ್ಟಕಡೆಯ ಕಾರ್ಮಿಕನವರೆಗೆ ವಿದ್ಯಾಸಿಂಧುತೀರ್ಥಶ್ರೀಪಾದರು ಪ್ರೀತಿಯನ್ನು ಸಂಪಾದಿಸಿದ್ದರು. ಆ ಪ್ರೀತಿಗೆ, ಆ ಭಕ್ತಿಗೆ ಕಾರಣ ಅವರಲ್ಲಿದ್ದ ಅಪ್ರತಿಮ ಔದಾರ್ಯ. ಇವತ್ತಿನ

ಲೆಕ್ಕದಲ್ಲಿ ಒಂದು ಟನ್ನು ಬಂಗಾರವನ್ನು ಕರಗಿಸಿ ಊರೂರುಗಳಿಗೆ ಧಾನ್ಯವನ್ನು ಹಂಚಿದ ಆ ಔದಾರ್ಯಕ್ಕೆ ಪ್ರತಿಯಾಗಿ ಏನೂ ನೀಡಿದರೂ ಕಡಿಮೆ.

**ಮಠಗಳಿಗೆ ರಾಜರು, ಅಧಿಕಾರಿಗಳು ನೀಡುವ ಹಣ ಮತ್ತೆ ಸಮಾಜಕ್ಕೇ ಸೇರಬೇಕು, ಯೋಗ್ಯ ಸಮಯದಲ್ಲಿ ಸೇರಬೇಕು ಎನ್ನುವದನ್ನು ನಮ್ಮ ಪರಂಪರೆಯ ಶ್ರೀ ಲಕ್ಷ್ಮೀಕಾಂತತೀರ್ಥರು, ಶ್ರೀವಿದ್ಯಾಸಿಂಧುತೀರ್ಥರು, ಶ್ರೀವಿದ್ಯಾವಾರಿಧಿತೀರ್ಥರು ಆಚರಿಸಿ ತೋರಿಸಿದ್ದಾರೆ.**

ಗುರುಗಳ ಆರಾಧನೆಯ ನಂತರ ವಿದ್ಯಾಶ್ರೀಧರತೀರ್ಥರು ಸೋಸಲೆಯಲ್ಲಿಯೇ ಚಾತುರ್ಮಾಸ್ಯಕ್ಕೆ ಕೂಡುತ್ತಾರೆ. ಮಧುರೈ ಪ್ರಾಂತದಲ್ಲಿ ವಿಶ್ವನಾಥಮಿಶ್ರನನ್ನು ಗೆದ್ದಿದ್ದ ಅವರ ಕೀರ್ತಿ ತಮಿಳುನಾಡಿನ ಭಕ್ತವೃಂದವನ್ನು ಆಕರ್ಷಿಸುತ್ತದೆ. ಎಲ್ಲರೂ ಬಂದು ತಮ್ಮ ಪ್ರಾಂತಕ್ಕೆ ಬರಲು ಪ್ರಾರ್ಥಿಸುತ್ತಾರೆ. ಭಾದ್ರಪದಪೂರ್ಣಿಮೆಯ ದಿವಸ ಗುರುಗಳಿಗೆ ನಮಸ್ಕಾರ ಮಾಡಿ ನಿರಂತರ

ಸಂಚಾರಕ್ಕಾಗಿ ಹೊರಡುತ್ತಾರೆ. ಅವರ ಯಾತ್ರೆ ತಮಿಳುನಾಡು ಮತ್ತು ಕೇರಳದ ಪ್ರಾಂತದಲ್ಲಿ ಅತ್ಯಧಿಕವಾಗಿ ನಡೆಯುತ್ತದೆ. ನಿಂತಲ್ಲಿ ನಿಲ್ಲದೆ ಪ್ರತಿಯೊಂದು ಊರಿಗೂ ಭೇಟಿ ನೀಡಿ, ಅಲ್ಲಿನ ಜನರಿಗೆ ತತ್ತ್ವೋಪದೇಶ ಮಾಡುತ್ತ, ಅವರ ಕಷ್ಟಗಳನ್ನು ಪರಿಹರಿಸುತ್ತ ಮುಂದೆ ಸಾಗುತ್ತಾರೆ.

ವಿದ್ಯಾಶ್ರೀಧರತೀರ್ಥರದು ಅಪ್ರತಿಮ ಯೋಗಶಕ್ತಿ. ಅವರು ಓಡಾಡುತ್ತಿದ್ದ ಪ್ರದೇಶದಲ್ಲಿ ಮಳೆಬೆಳೆ ಸಮೃದ್ಧವಾಗಿ ಉಂಟಾಗುತ್ತಿತ್ತು. ಕ್ಷಾಮಕಾಲದಲ್ಲಿ ಸಮಾಜರಕ್ಷಣೆಯ ಕಾರ್ಯದಲ್ಲಿ ಗುರುಗಳ ಕೈಂಕರ್ಯವನ್ನು ಮಾಡಿದ್ದ ಅವರಿಗೆ ಭಗವಂತ ಅನುಗ್ರಹಿಸಿದ್ದ ವರವದು. ಅವರಿಗೆ ಅತೀಂದ್ರಿಯಜ್ಞಾನವಿತ್ತು ಎನ್ನುವದನ್ನು ಶ್ರೀಮಠದ ಸಂಪ್ರದಾಯ ದಾಖಲಿಸುತ್ತದೆ. ತಮ್ಮ ಜ್ಞಾನವನ್ನು ಸಮಾಜದ ಉದ್ಧಾರಕ್ಕಾಗಿ ಬಳಸಿದ ಮಹಾನುಭಾವರು ಅವರು. ನೀರಿಲ್ಲದ ಸ್ಥಳಗಳಲ್ಲಿ ಹತ್ತಾರು ಕೆರೆಗಳನ್ನು ಕಟ್ಟಿಸಿದವರು. ಉಪ್ಪುನೀರಿನ ಬಾವಿಗಳನ್ನು ಸಿಹಿನೀರಿನ ಬಾವಿಗಳನ್ನಾಗಿ ಮಾಡಿದರು. ಅವರ ಚರಿತ್ರೆಯಲ್ಲಿ ದಾಖಲಾಗುವ ಮಹತ್ತ್ವದ ಅಂಶವೆಂದರೆ —

**“ವೃಷ್ಟಿಧಾನ್ಯಪ್ರದಾತೇತಿ ಚೋಲಾ ನಿತ್ಯಂ ಸ್ಮರಂತಿ ಹಿ” ಎಂದು.**

ಮಳೆ ಬೆಳೆಗಳನ್ನು ಕರುಣಿಸುವ ಸ್ವಾಮಿಗಳು ಎಂದೇ ತಮಿಳುನಾಡಿನ ಕೃಷಿಕವರ್ಗ ವಿದ್ಯಾಶ್ರೀಧರತೀರ್ಥರನ್ನು ನೆನೆಯುತ್ತದೆ. ಸ್ವಾಮಿಗಳು ಸಂಚರಣಕ್ಕಾಗಿ ಬಂದರೆ ರೈತರು ತಮ್ಮ ಹೊಲಗಳಲ್ಲಿ ಓಡಾಡಲು ಪ್ರಾರ್ಥಿಸುತ್ತಿದ್ದರೆ. ಅವರು ಕಾಲಿಟ್ಟ ಪ್ರದೇಶದಲ್ಲಿ ಮಳೆ ಸಮೃದ್ಧವಾಗಿ ಆಗುತ್ತಿತ್ತು. ಅವರು ಓಡಾಡಿದ ಜಮೀನಿನಲ್ಲಿ ಬಂಗಾರದಂತಹ ಬೆಳೆ ಬೆಳೆಯುತ್ತಿತ್ತು. ವಿದ್ಯಾಶ್ರೀಧರತೀರ್ಥರಿಗೆ ಆ ಬಡಜನರ ಮೇಲೆ ಎಷ್ಟು ಅಕ್ಕರೆ ಎಂದರೆ ಹೊಲಗಳಲ್ಲಿಯೇ ತೆಂಗಿನ ಗರಿಗಳ ಚಪ್ಪರವನ್ನು ಹಾಕಿಸಿ ಅಲ್ಲಿಯೇ ಸಂಸ್ಥಾನದ ಪೂಜೆಯನ್ನು ನೆರವೇರಿಸುತ್ತಿದ್ದರು.

ಇಷ್ಟೆಲ್ಲ ಅದ್ಭುತವನ್ನು ಸಾಧಿಸಲಿಕ್ಕೆ ಅವರು ಬಹಳ ಸಮಯ ತೆಗೆದುಕೊಳ್ಳಲಿಲ್ಲ. ಗುರುಗಳು ಕಾಲವಾದ ನಂತರ ಅವರು ಪೀಠದಲ್ಲಿದ್ದದ್ದು ಕೇವಲ ಮೂರು ವರ್ಷಗಳು ಮಾತ್ರ. ಆದರೆ, ತಮ್ಮ ನಿರಂತರ ಸಂಚಾರ, ಅಪ್ರತಿಮಜ್ಞಾನ, ಶುದ್ಧವಾದ

ಚಾರಿತ್ರ್ಯ, ನಿರ್ವ್ಯಾಜವಾದ ಕಾರುಣ್ಯ, ದಿವ್ಯವಾದ ಯೋಗಶಕ್ತಿಗಳಿಂದ ಅವರು ಜನಸಾಗರವನ್ನೇ ಅನುಗ್ರಹಿಸಿದರು. ಶ್ರೀಮದ್ ವ್ಯಾಸರಾಜಸಂಸ್ಥಾನದ ಧ್ರುವತಾರೆಯಾಗಿ ಉಳಿದರು.

ಈ ಎಲ್ಲ ಐತಿಹಾಸಿಕ ಘಟನೆಗಳನ್ನು ದಾಖಲಿಸಿಟ್ಟವರು ನಮ್ಮ ಪರಂಪರೆಯ ಮತ್ತೊಬ್ಬ ಭೂಷಾಮಣಿ ಶ್ರೀವಿದ್ಯಾವಾರಿಧಿತೀರ್ಥ-ಶ್ರೀಪಾದಂಗಳವರು. ತಮ್ಮ ಸಣ್ಣವಯಸ್ಸಿನಲ್ಲಿ ಶ್ರೀವಿದ್ಯಾಶ್ರೀಧರತೀರ್ಥರನ್ನು ಕಣ್ಣಾರೆ ಕಂಡಿದ್ದ, ಅವರ ಅನುಗ್ರಹಕ್ಕೆ ಪಾತ್ರರಾಗಿದ್ದ ಮಹಾನುಭಾವರು. ತಮ್ಮ ಪರಂಪರೆಯ ಗುರುಗಳ ಚರಿತ್ರೆಯನ್ನು ಕೀರ್ತನ ಮಾಡುತ್ತಲೇ ಜೀವನವನ್ನು ಸಾರ್ಥಕ ಮಾಡಿಕೊಂಡ ಮಹಾಜ್ಞಾನಿಗಳು.

ವಿದ್ಯಾಶ್ರೀಧರತೀರ್ಥಶ್ರೀಪಾದಂಗಳವರು ತಮ್ಮ ಪ್ರೀತಿಯ ಶಿಷ್ಯರಾದ ಶ್ರೀ ವ್ಯಾಸರಾಮಾಚಾರ್ಯರಿಗೆ ತಿರುಪತಿಯಲ್ಲಿ ಸಂನ್ಯಾಸವನ್ನು ನೀಡಿ ಮೂಲಪಟ್ಟಾಭಿರಾಮನ, ಮೂಲಗೋಪಾಲಕೃಷ್ಣನ ಪೂಜೆಯ ಸೌಭಾಗ್ಯವನ್ನು ಅನುಗ್ರಹಿಸಿ

ವಿದ್ಯಾಶ್ರೀನಿವಾಸತೀರ್ಥರು ಎಂದು ನಾಮಕರಣವನ್ನು ಮಾಡುತ್ತಾರೆ. ನೂತನ ಶಿಷ್ಯರಿಗೆ ಶ್ರೀಮಠದ ಎಲ್ಲ ಸಂಪ್ರದಾಯಗಳನ್ನು ಉಪದೇಶಿಸಿ ತಿರುಪತಿಯಿಂದ ಶ್ರೀರಂಗಕ್ಕೆ ಬರುತ್ತಾರೆ.

ಚೈತ್ರಕೃಷ್ಣಚತುರ್ದಶಿಯಂದು ಶ್ರೀರಂಗದಲ್ಲಿ ಶ್ರೀಮನ್ ನ್ಯಾಯಾಮೃತದ ಮಂಗಳಶ್ಲೋಕಗಳನ್ನು ಗಟ್ಟಿಯಾಗಿ ಉಚ್ಚರಿಸಿ, ತಮ್ಮ ಗುರುಗಳನ್ನು ಭಕ್ತಿಯಿಂದ ಸ್ಮರಿಸಿ ಶ್ರೀ ವಿದ್ಯಾಶ್ರೀಧರತೀರ್ಥಶ್ರೀಪಾದಂಗಳವರು ದೇಹತ್ಯಾಗ ಮಾಡುತ್ತಾರೆ.

ದೇಹತ್ಯಾಗ ಮಾಡಿದ ಬಳಿಕವೂ ಅವರ ಮಾಹಾತ್ಮ್ಯದ ಪ್ರಕಾಶ ಹರಡುತ್ತದೆ. ಸಂನ್ಯಾಸಿಗಳ ದೇಹವನ್ನು, ಪವಿತ್ರವಾದ ಸ್ಥಳದಲ್ಲಿ ಉಪ್ಪಿನೊಂದಿಗೆ ಹುದುಗಿಸಿಟ್ಟು ನಲವತ್ತೆಂಟು ದಿವಸಗಳ ನಂತರ ಮತ್ತೆ ಸಂಸ್ಕಾರಕ್ಕಾಗಿ ತೆಗೆದು ವೃಂದಾವನವನ್ನು ಪ್ರತಿಷ್ಠಾಪಿಸಬೇಕು. ನಲವತ್ತೆಂಟು ದಿವಸಗಳ ನಂತರ ದೇಹವನ್ನು ತೆಗೆದರೆ ಇಡಿಯ ಪ್ರದೇಶದಲ್ಲಿ ಸುಗಂಧ ಹರಡುತ್ತದೆ. ಅವರ ದೇಹದ ಗೋಪೀಚಂದನ ಅಂಗಾರ ಅಕ್ಷತೆಗಳು ಸಹ

ಮಾಸಿರುವದಿಲ್ಲ. ಕೈಯಲ್ಲಿನ ಜಪಮಣಿ ಕೆಳಗೆ ಬಿದ್ದಿರುವದಿಲ್ಲ. ತಮ್ಮ ನಿರ್ಯಾಣದ ನಂತರವೂ



Sri Vidyasridhara theertharu
1884-1887,Srirangam

ತಮ್ಮ ದೇಹದ ಮೇಲೆ ನಿಯಂತ್ರಣವನ್ನು ಸಾಧಿಸಿದ್ದ ಯೋಗಿವರ್ಯರು ಶ್ರೀವಿದ್ಯಾಶ್ರೀಧರತೀರ್ಥರು.

ಹೀಗೆ ಸಮಗ್ರವ್ಯಾಸತ್ರಯಗಳನ್ನು ಮುಖೋದ್ಗತವಾಗಿ ಪಾಠ ಹೇಳುತ್ತಿದ್ದ ಪರಿಶುದ್ಧ

ಜ್ಞಾನ, ಗರ್ವಿಷ್ಠರಾದ ವಾದಿಗಳನ್ನೂ ಮಣಿಸಿದ ಅಪ್ರತಿಮಪಾಂಡಿತ್ಯ, ಎಷ್ಟು ಎತ್ತರದ ಮಹಾನುಭಾವರಾಗಿದ್ದರೂ ಬಡಜನರ ಮೇಲೆ ಪ್ರೀತಿಯನ್ನು ತೋರುತ್ತಿದ್ದ ವಾತ್ಸಲ್ಯ, ಔದಾರ್ಯಗಳು, ತಮ್ಮ ಜಪ ಪೂಜೆಗಳಿಂದ ಸಾಧಿಸಿದ್ದ ಯೋಗಶಕ್ತಿ ಮುಂತಾದ ಮಹಾಸದ್ಗುಣಗಳ ನಿಧಿಯಾಗಿದ್ದ ತಮ್ಮ ಗುರುಗಳನ್ನು ಶ್ರೀ ವಿದ್ಯಾಶ್ರೀನಿವಾಸತೀರ್ಥರು ಹೀಗೆ ಸ್ತೋತ್ರ ಮಾಡುತ್ತಾರೆ —

**ದುರ್ವಾದಿಮತ್ತಮಾತಂಗ-**
**ಕಂಠೀರವ ಉದಾರಧೀಃ।**
**ವಿದ್ಯಾಶ್ರೀಧರಯೋಗೀಶಃ ಶ್ರೇಯಸೇ**
**ಭೂಯಸೇಽಸ್ತು ಮೇ ॥**

“ದುಷ್ಟವಾದಗಳನ್ನು ಹರಡುವ, ವಿದ್ಯಾಮದೋನ್ಮತ್ತರಾದ ವಾದಿಗಜಗಳಿಗೆ ಸಿಂಹ ನನ್ನ ಗುರುಗಳು, ಶಾಸ್ತ್ರತತ್ವಗಳನ್ನು ಸುಲಭವಾಗಿ ಅರ್ಥ ಮಾಡಿಸುವ, ಭಕ್ತಜನರನ್ನು ಕಾಪಿಡುವ ಉದಾರಬುದ್ಧಿಯ ವಾತ್ಸಲ್ಯನಿಧಿಗಳು ನನ್ನ ಗುರುಗಲು, ತಮ್ಮ ಶ್ರೇಷ್ಠತಮವಾದ

ಸಾಧನೆಯಿಂದ ಅದ್ಭುತ ಯೋಗಶಕ್ತಿಯಿನ್ನು ಸಂಪಾದಿಸಿದ್ದವರು ನನ್ನ ಗುರುಗಳು, ಅಂತಹ ಶ್ರೀವಿದ್ಯಾಶ್ರೀಧರತೀರ್ಥಶ್ರೀಪಾದಂಗಳವರು ನನಗೆ ಮಹತ್ತರವಾದ ಶ್ರೇಯಸನ್ನು ಅನುಗ್ರಹಿಸಲಿ" ಎಂದು ಶ್ರೀವಿದ್ಯಾಶ್ರೀನಿವಾಸತೀರ್ಥರು ಭಕ್ತಿಯಿಂದ ಪ್ರಾರ್ಥನೆ ಮಾಡುತ್ತಾರೆ.

**ಆ ಮಹಾಗುರುಗಳ ಅನುಗ್ರಹ ನಮ್ಮ ಮೇಲಿರಲಿ, ನಾವು ನಿರಂತರ ಶಾಸ್ತ್ರದ ಅಧ್ಯಯನದಲ್ಲಿ ಆಸಕ್ತರಾಗುವಂತೆ, ಬಡಬಗ್ಗರ ಕಷ್ಟಗಳಿಗೆ ಸಹಾಯ ಮಾಡುವ ಔದಾರ್ಯ ನಮ್ಮಲ್ಲಿ ಮೂಡುವಂತೆ ಕರುಣಿಸಲಿ, ಅದಕ್ಕಿಂತ ಮುಖ್ಯವಾಗಿ ನಮ್ಮ ಶ್ರೀಮದ್ ವ್ಯಾಸರಾಜಸಂಸ್ಥಾನದ ಆ ವೈಭವ, ಪಾಂಡಿತ್ಯ, ಔದಾರ್ಯಗಳು ಮರುಕಳಿಸುವಂತೆ ಅನುಗ್ರಹಿಸಲಿ ಎಂದು ಸಮಗ್ರ ಜೀವದ ಭಕ್ತಿಯಿಂದ ಆ ಮಹಾಗುರುಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ.**

ಒಂದು ವರ್ಷಕಾಲದ ಸುದೀರ್ಘ ಅವಧಿಯಲ್ಲಿ ಬೃಹತೀಸಹಸ್ರಮಂತ್ರಗಳ ವ್ಯಾಖ್ಯಾನವನ್ನು ಮಾಡಿದ ಆ ಮಹಾನುಭಾವರ ಚರಣಕ್ಕೆ

ಶ್ರೀಮಧ್ವವಿಜಯದ ಉಪನ್ಯಾಸಗಳನ್ನು ಮಾಡಿದ ಸತ್ಕರ್ಮವನ್ನು ಸಮರ್ಪಿಸುತ್ತೇನೆ. ಸಮಗ್ರ ಭಾಗವತದ ಉಪನ್ಯಾಸವನ್ನೂ ಹೀಗೇ ಸಮರ್ಪಿಸುವ ಸೌಭಾಗ್ಯವನ್ನು ಕರುಣಿಸಿ ಎಂದು ಪ್ರಾರ್ಥಿಸಿ ಗುರುಸ್ಮರಣೆಯಿಂದುಂಟಾದ ಸಮಗ್ರಪುಣ್ಯವನ್ನು ನನ್ನ ಗುರುಗಳ ಅಂತರ್ಯಾಮಿಯ ಚರಣಕ್ಕೊಪ್ಪಿಸಿಕೊಳ್ಳುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491